ರಲ್ಲಿ ೧೨.೩ ಕೋಟಿ ರೂಪಾಯಿಗಳು, ೧೯೮೮-೮೯ರಲ್ಲಿ ೧೩.೫೦ ಕೋಟಿ ರೂಪಾಯಿಗಳನ್ನು ಸಬ್ಸಿಡಿ ಹಣ ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ.

ಕಲಾತ್ಮಕವಾದಂಥ ಚಿತ್ರಗಳಿಗೆ ಮೂರು ಲಕ್ಷ ರೂಪಾಯಿಗಳಷ್ಟು ಹಾಗೂ ಎರಡೂವರೆ ಲಕ್ಷ ರೂಪಾಯಿಗಳಷ್ಟು ಉಳಿದಿರತಕ್ಕಂಥ ಎಲ್ಲಾ ಚಿತ್ರಗಳಿಗೆ ಕೊಡತಕ್ಕಂಥ ರಿಯಾಯಿತಿ ಅಲ್ಲದೆ, ಅದರ ಜೊತೆಗೆ ಎಲ್ಲೆಲ್ಲಿ ೭೦ ಎಂ.ಎಂ. ಸಿನಿಮಾ ತಯಾರು ಮಾಡುವುದಕ್ಕಾಗಿ ನಮಗೆ ಇಲ್ಲಿ ಸೌಲಭ್ಯಗಳು ಇಲ್ಲ ಎ ದು ನಮಗೆ ಪತ್ರಗಳನ್ನು ಬರೆಯುತ್ತಾರೆ, ಆ ಪತ್ರಗಳ ಆಧಾರ ಮೇಲೆ ವಿಚಾರಣೆಯನ್ನು ಮಾಡಿ ಅವರಿಗೆ ನಾವು ಪರವಾನಿಗೆಯನ್ನು ಕೊಡುತ್ತೇವೆ. ನಮ್ಮ ರಾಜ್ಯದಲ್ಲಿ ಎಂಥ ಯಾವ ಸೌಲಭ್ಯಗಳು ಇಲ್ಲದಿರತಕ್ಕಂಥ ಸಂದರ್ಭಗಳಲ್ಲಿ ಸರಕಾರದ ಒಪ್ಪಿಗೆಯನ್ನು ಪಡೆದು ಚಲನಚಿತ್ರಗಳನ್ನು ತಯಾರು ಮಾತಬಹುದು, ೭೦ ಎಂ.ಎಂ. ಸಿನಿಮಾಗಳಲ್ಲಿ ಟ್ರೈಕ್ ಸೌಂಡ್ ರೆಕಾರ್ಡಿಂಗ್ ಇಲ್ಲಿ ಮಾಡುವಂಥ ಸೌಲಭ್ಯಗಳು ಇಲ್ಲದಿರುವುದರಿಂದ, ನಿರ್ಮಾಪಕರಾದ ರಾಜೇಂದ್ರಸಿಂಗ್ ರವರಿಗೆ ಒಂದು ಚಿತ್ರಕ್ಕೆ ಮತ್ತು ''ಶಬ್ದವೇಧದ ಸರದಾರ'' ಎಂಬ ಚಲನಚಿತ್ರಕ್ಕೆ ನಾವು ಪರವಾನಿಗೆಯನ್ನು ಬೇರೆ ರಾಜ್ಯಗಳಲ್ಲಿ ತಯಾರು ಮಾಡಲು ಕೊಟ್ಟಿದ್ದೇವೆ ಅದೇ ರೀತಿಯಲ್ಲಿ ಬೇರೆ ನಿರ್ಮಾಪಕರು ಮನವಿಯನ್ನು ಕೊಟ್ಟರೂ ಕೂಡ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್.—ಈ ಒಂದು ಉದ್ಯಮದಿಂದ ೩.೨೫ ಕೋಟಿ ರೂಪಾಯಿಗಳಷ್ಟು ಲಾಭ ಬರುತ್ತಿರುವಾಗ ಹೆಚ್ಚಿನ ಸೌಲಭ್ಯಗಳು ಇರದ ಕಂಠೀರವ ಸ್ಟುಡಿಯೋವನ್ನು ಅಭಿವೃದ್ಧಿ ಪಡಿಸ ಬಹುದಲ್ಲ ?

ಶ್ರೀ ಎಂ.ಪಿ. ಪ್ರಕಾಶ್.—ಇಲ್ಲಿ ಲಾಭ-ನಷ್ಟದ ಪ್ರಶ್ನೆ ಬರುವುದಿಲ್ಲ, ತೆರಿಗೆಯ ಪ್ರಶ್ನೆ ಇದೆ. ಮನೋರಂಜನ ತೆರಿಗೆಯ ರೂಪದಲ್ಲಿ ಸರಕಾರಕ್ಕೆ ೩೭.೭೦ ಕೋಟಿ ರೂಪಾಯಿಗಳು ಬರುತ್ತದೆ, ಕಂಠೀರವ ಸ್ಟುಡಿಯೋಗೆ ಸಂಬಂಧಪಟ್ಟಂತೆ ಸುಮಾರು ಜಾಗ ಇದೆ. ಈಗ ಅದರಲ್ಲಿ ಸಾಮಾನ್ಯವಾಗಿ ಎಲ್ಲಾ ಸೌಲಭ್ಯಗಳೂ ಇವೆ, ಎಲ್ಲಿ ಫ್ಲೋರ್ ಫ್ಲೋರನ್ನು ತಯಾರು ಮಾಡಿದ್ದೇವೆ. ನಾಗರ ಇದೆ, ಸೌಂಡ್ ರೆಕಾರ್ಡಿಂಗ್ ಇದೆ,ಪ್ರಸಾದ್ ಲಾಬೋರೇಟರಿಯವರಿಗೆ ಕೂಡ ಅಲ್ಲಿ ಕಲರ್ ಪ್ರೊಸೆಸಿಂಗ್ ಯೂನಿಟ್ ಹಾಕಿ ಕೊಳ್ಳತಕ್ಕ ವಿಚಾರದ ಬಗ್ಗೆ ಚರ್ಚೆಯಾಗುತ್ತಾ ಇದೆ. ಇನ್ನೂ ಏನೇನು ಸೌಲಭ್ಯಗಳನ್ನು ಆ ಉದ್ಯಮಕ್ಕೆ ಮಾಡಿಕೊಡ ಬೇಕೋ ಅದನ್ನು ಮಾಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಕೆ.ಬಿ. ಶಾಣಪ್ಪ.—ಅಧ್ಯಕ್ಷರೇ, ಈ, ಶರವೇಗದ ಸರದಾರ ಚಿತ್ರವನ್ನು ಯಾರು ತೆಗೆಯುತ್ತಿದ್ದಾರೆ ಗೊತ್ತಿದೆಯೇ ?

ಶ್ರೀ ಎಂ.ಪಿ. ಪ್ರಕಾಶ್.—ಅದರ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ.

ಮ್ಯಾಂಚೆಸ್ಟರ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನಕ್ಕಾಗಿ ರಾಜ್ಯ ಸರಕಾರ ಮಾಡಿದ ಹಣದ ಬಗ್ಗೆ

೨೯೪೫. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).— ಮಾನ್ಯ ವಾರ್ತಾ ಪ್ರವಾಸೋದ್ಯಮ ಹಾಗೂ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮ್ಯಾಂಚೆಸ್ಟರ್‌ನಲ್ಲಿ ಆಗಸ್ಟ್ ೨೬ನೇ ತಾರೀಖಿನಿಂದ ನಡೆದ ವಿಶ್ವ ಕನ್ನಡ ಸಮ್ಮೇಳನಕ್ಕೆ ತೆರಳಿದ ಮುಖ್ಯ ಮಂತ್ರಿ ಹಾಗೂ ಇತರೆ ಪ್ರತಿನಿಧಿಗಳಿಗೆ ಹಾಗೂ ಕಾರ್ಯಕ್ರಮಕ್ಕೆ ರಾಜ್ಯದ ಬೊಕ್ಕಸದಿಂದಾದ ವೆಚ್ಚವೆಷ್ಟು ?

೧) ಮುಖ್ಯಮಂತ್ರಿ ಹಾಗೂ ಇತರ ಸಚಿವರುಗಳ ಒಟ್ಟು ವೆಚ್ಚ

೨) ಕಲಾವಿದರು ಹಾಗೂ ವಿಶೇಷ ಆಹ್ವಾನಿತರು

೩) ಅಧಿಕಾರಿಗಳ ಪ್ರಯಾಣ ವೆಚ್ಚ

೪) ವಸ್ತುಪ್ರದರ್ಶನ ''ನಾಡು-ನುಡಿ-ಸಂಸ್ಕೃತಿ'' ಅದರ ತಯಾರಿಕೆಗೆ

೫) ಮ್ಯಾಂಚೆಸ್ಟರ್ ಮತ್ತು ಲಂಡನ್ ನಗರದಲ್ಲಿ ಪ್ರದರ್ಶನ ವ್ಯವಸ್ಥೆಗೆ ಸ್ಥಳೀಯ ವೆಚ್ಚ, ಸಾರಿಗೆ ಇತ್ಯಾದಿ.

೬) ಪ್ರದರ್ಶನದ ಸಾಮಾನುಗಳನ್ನು ಹಾಗೂ ಕರಕುಶಲ, ಚರ್ಮ, ರೇಷ್ಮೆ, ಕೈಮಗ್ಗದ ಬಟ್ಟೆಗಳ ಸಾಗಾಣಿಕೆಗೆ (ಬೆಂಗಳೂರಿನಿಂದ ಸಾಗಾಣಿಕೆಗೆ ಮತ್ತು ವಾಪಸ್ಸು ತರುವುದಕ್ಕೆ)

(ಸಚಿವರುಗಳ ಪ್ರವಾಸದ ವೆಚ್ಚ ಸೇರಿರುವುದಿಲ್ಲ)

ಅ) ಸರ್ಕಾರದ ಪ್ರತಿನಿಧಿಗಳಾಗಿ ಈ ಸಮ್ಮೇಳನದಲ್ಲಿ ಭಾಗವಹಿಸಿದ ವ್ಯಕ್ತಿಗಳೆಷ್ಟು ?

ಇ) ಯಾವ ಯಾವ ಕ್ಷೇತ್ರದ ಜನರನ್ನು ಆಯ್ಕೆ ಮಾಡಲಾಗಿತ್ತು ?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ, ಹಾಗೂ ಸಂಸ್ಕೃತಿ ಸಚಿವರು).—

ಈ ಬಗ್ಗೆ ವೆಚ್ಚ ಬರಿಸಿದ ಬಿಲ್ಲುಗಳ್ಳು ಬಂದಿರುವುದಿಲ್ಲ,

೨)	೫,೧೫,೮ ೬–೦೦
೩)	೨,೬೩,೧೦೭–೦೦
೪)	೨,೩೫,೦೦೦–೦೦
೫)	೧,೨೫ ೦೦೦–೦೦
೬)	೩,೮೮,೦೦೦–೦೦
	೧೫,೨೬,೯೩೩–೦೦

ಅ) ೩೫

ಇ) ಯಕ್ಷಗಾನ, ಭರತನಾಟ್ಯ, ಲಘುಸಂಗೀತ, ವಾದ್ಯಸಂಗೀತ, ನಾಟಕದ ಕಲಾವಿದರು ಹಾಗೂ ಸಾಹಿತ್ಯ, ಕ್ರೀಡೆ, ಚಲನಚಿತ್ರದ ಖ್ಯಾತ ವ್ಯಕ್ತಿಗಳು, ಮುಖ್ಯಮಂತ್ರಿಗಳವರು, ಇಬ್ಬರು ಸಚಿವರುಗಳು ಹಾಗೂ ವ್ಯವಸ್ಥೆಗೊಳಿಸಲು ಅಧಿಕಾರಿಗಳು.

ಶ್ರೀ ಬಿ. ಲಕ್ಕಪ್ಪ.— ಅಧ್ಯಕ್ಷರೆ, ಇಲ್ಲಿ ಕೊಟ್ಟಿರತಕ್ಕಂಥ ಅಂಕಿಅಂಶಗಳ ಪ್ರಕಾರ. ೧೫,೨೬,೯೩೩ ರೂ.ಗಳಷ್ಟು ಖರ್ಚಾಗಿದೆ. ಇನ್ನೂ ಮಂತ್ರಿಗಳಿಗಾಗಿ ಖರ್ಚಾಗಿರತಕ್ಕಂಥ ಹಣದ ಲೆಕ್ಕ ಬಂದಿಲ್ಲ. ಅದನ್ನೂ ಸೇರಿಸಿದರೆ, ಒಟ್ಟು ೨೦ ಲಕ್ಷ ರೂಪಾಯಿಗಳಷ್ಟು ಆಗಬಹುದು. ರಾಜ್ಯದಲ್ಲಿ ಒಪ್ಪೊತ್ತಿನ ಪ್ರಾಥಮಿಕ ಶಾಲೆಗಳಲ್ಲಿ ಕಟ್ಟಡ ಇಲ್ಲದೆ, ಮರಗಳ ಕೆಳಗೆ, ಚಾವಣಿಗಳಲ್ಲಿ ಮಕ್ಕಳಿಗೆ ಪಾಠ ಮಾಡತಕ್ಕಂಥ ಸಂದರ್ಭದಲ್ಲಿ ಇಷ್ಟೊಂದು ದೊಡ್ಡ ಮೊತ್ತದ ಹಣವನ್ನು ಮ್ಯಾಂಚೆಸ್ಟರ್‌ನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ಮಾಡುವುದಕ್ಕೆ ಖರ್ಚು ಮಾಡತಕ್ಕಂಥ ಅಗತ್ಯ ಇತ್ತೇ? ಮತ್ತು ಅದೇ ಸಮ್ಮೇಳನದಲ್ಲಿ ಭಾಗವಹಿಸಲು ಕಲಾವಿದರುಗಳ ಒಂದು ನಿಯೋಗವನ್ನು ಕಳುಹಿಸಿದ್ದೀರಿ. ಹಾಗೆ ಅವರನ್ನು ಆಯ್ಕೆ ಮಾಡುವಾಗ ಅನುಸರಿಸಿದ ನಿಯಮಗಳು ಯಾವುವು ? ಅರ್ಹ ಕಲಾವಿದರುಗಳ ಆಯ್ಕೆ ಆಗಿಲ್ಲ ಎಂಬ ಬಗ್ಗೆ ರಾಜ್ಯವ್ಯಾಪಿ ದೂರುಗಳು ಬಂದಿವೆ. ಆದುದರಿಂದ ಯಾವ ಆಧಾರದ ಮೇಲೆ ಕಲಾವಿದರುಗಳ ಆಯ್ಕೆಯಾಗಿದೆ ಮತ್ತು ಯಾರ್ಯಾರನ್ನು ಆಯ್ಕೆ ಮಾಡಿ ಕಳುಹಿಸಿದ್ದೀರಿ ಎಂಬ ಬಗ್ಗೆ ವಿವರಾತ್ಮಕವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.— ಮಾನ್ಯ ಸದಸ್ಯರು ಹೇಳಿದಂತೆ ಒಟ್ಟು ವೆಚ್ಚ ೩೦ ಲಕ್ಷಗಳಷ್ಟು ಆಗಲಾರದು. ಮುಖ್ಯಮಂತ್ರಿಗಳ ಮತ್ತು ಇತರ ಸಚಿವರುಗಳ ವೆಚ್ಚದ ಲೆಕ್ಕ ಬಂದಿಲ್ಲ ಎನ್ನುವುದು ಸರಿಯಲ್ಲ, ಅವರಿಂದ ಕೇವಲ ಪ್ರಯಾಣದ ವೆಚ್ಚದ ಬಗ್ಗೆ ಮಾತ್ರ ಟಿ. ಎ. ಬಿಲ್‌ನ ಮೊತ್ತ ಬರಬೇಕಾಗಿದೆ, ಹಾಗೆಯೇ ಮ್ಯಾಂಚೆಸ್ಟರ್‌ನಲ್ಲಿ ವಾಸ್ತವ್ಯದ ಖರ್ಚನ್ನು ಅಲ್ಲಿನ ಆತಿಥೇಯ ಸಂಸ್ಥೆಗಳು ವಹಿಸಿಕೊಂಡಿರುವುದರಿಂದ ಪ್ರಾಯಶಃ ಯಾವುದೇ ಸಂದರ್ಭದಲ್ಲಿ ಸದಸ್ಯರು ಹೇಳುವಷ್ಟು ಮೊತ್ತದ ಖರ್ಚು ಆಗಲಾರದು. ಟಿ.ಎ. ಬಿಲ್‌ನ ೩೦ ಸಾವಿರ ರೂಗಳನ್ನು ಸೇರಿಸಿದರೂ ಕೂಡ ೧೫ ಲಕ್ಷದ ೨೬ ಸಾವಿರ ಇದ್ದದ್ದು ಒಂದು ೩೦ ಸಾವಿರ ರೂಗಳಷ್ಟು ಹೆಚ್ಚಿಗೆ ಆಗಬಹುದು. ಅಂತೆಯೇ ಇಷ್ಟು ಹಣವನ್ನು ಖರ್ಚು ಮಾಡಿ ಮ್ಯಾಂಚೆಸ್ಟರ್‌ನಲ್ಲಿ ಕನ್ನಡ ಸಮ್ಮೇಳನ ಮಾಡುವಂಥ ಅಗತ್ಯ ಇತ್ತೇ ಎನ್ನುವಂಥಾದ್ದು ವಿವಾದಾತ್ಮಕವಾದಂಥ ಪ್ರಶ್ನೆ ಆಗಿದೆ. ಇದರಲ್ಲಿ ಸುಮಾರು ೧೪ ಲಕ್ಷ ರೂಗಳನ್ನು ಅನುಮತಿ

ಯಾಗಿರುವ ಆಯವ್ಯಯದಲ್ಲಿ ಖರ್ಚು ಮಾಡಿದ್ದೇವೆ. ಆ ಮೇಲೆ ಕಡೇ ಘಳಿಗೆಯಲ್ಲಿ ಅಂದರೆ ಆಗಸ್ಟ್ ೭ರಂದು ನಮಗೆ ಒಪ್ಪಿಗೆ ಸಿಕ್ಕಿದ್ದರಿಂದ ಅನಿವಾರ್ಯವಾಗಿ ಹಡಗಿನಲ್ಲಿ ಕಳುಹಿಸಿಕೊಡಬೇಕಾಗಿದ್ದ ಪ್ರದರ್ಶನದ ಮತ್ತು ಕಲೆಗಳ ವಸ್ತುಗಳನ್ನು ವಿಮಾನದಲ್ಲಿ ೨೨ಲಕ್ಷ ೮೫ ಸಾವಿರ ರೂ.ಗಳನ್ನು ಖರ್ಚು ಮಾಡಿ ಕಳಿಸಬೇಕಾಯಿತು. ಇಲ್ಲದಿದ್ದರೆ ಈ ಖರ್ಚು ೧೪ ಲಕ್ಷದೊಳಗೇ ಆಗುತ್ತಿತ್ತು. ಇನ್ನು ಕಲಾವಿದರನ್ನು ಆರಿಸುವ ಬಗ್ಗೆ ಕೇಳಿದ್ದಾರೆ. ನಾವು ಆಯ್ಕೆ ಮಾಡುವ ಸಂದರ್ಭದಲ್ಲಿ ಸರ್ಕಾರ ತನ್ನ ವಿವೇಕವನ್ನು ಅಥವಾ ಅಧಿಕಾರವನ್ನು ಉಪಯೋಗಿಸದೆ ಸಂಬಂಧಿಸಿದ ನಾಟಕ ಸಂಗೀತ ಕಲಾ ಅಕಾಡೆಮಿಗಳಿಗೆ ಪತ್ರ ಬರೆಯುವ ಮೂಲಕ ಉತ್ತಮ ಕಲಾವಿದರನ್ನು ಕಳಿಸಬೇಕೆಂದು ಕೋರಲಾಗಿ, ಅವರು ಶಿಫಾರಸ್ಸು ಮಾಡಿದ ಕಲಾವಿದರನ್ನು ಕಳಿಸಿಕೊಟ್ಟಿದ್ದೇವೆ. ಇಡೀ ಕರ್ನಾಟಕದ ಜನತೆ ಈ ಆಯ್ಕೆಯನ್ನು ಒಪ್ಪಿದೆ. ಆದರೆ ಮ್ಯಾಂಚೆಸ್ಟರ್‌ನಲ್ಲಿ ಕನ್ನಡ ಮೇಳ ನಡೆಸಿದ್ದರ ಔಚಿತ್ಯದ ಬಗ್ಗೆ ಬಿನ್ನಾಭಿಪ್ರಾಯ ಇದೆ. ಇದರ ಬಗ್ಗೆ ಲಕ್ಕಪ್ಪನವರು ಅವರ ಅಭಿಪ್ರಾಯ ಇಟ್ಟುಕೊಳ್ಳಬಹುದು.

ಶ್ರೀ ಬಿ. ಲಕ್ಕಪ್ಪ.— ಇದು ಎಷ್ಟು ಹಾಸ್ಯಾಸ್ಪದವಾದದ್ದೆಂದರೆ ಹೊಟ್ಟಿಗೆ ಹಿಟ್ಟಿಲ್ಲದಿದ್ದಾಗ ಜುಟ್ಟಿಗೆ ಮಲ್ಲಿಗೆ ಹೂವಿನಂತೆ ಎಂಬಂತೆ ಆಗಿದೆ. ಒಂದು ವೇಳೆ ಕನ್ನಡದ ಬಗ್ಗೆ ಸರ್ಕಾರಕ್ಕೆ ಅಭಿಮಾನ ಇದ್ದರೆ ಅದನ್ನು ಮ್ಯಾಂಚೆಸ್ಟರ್‌ನಲ್ಲಿ ಕನ್ನಡ ಮೇಳ ಮಾಡುವ ಮೂಲಕ ಜನರಿಗೆ ತೋರಿಸಲು ಹೊರಟಿದ್ದು ಇನ್ನೂ ಹಾಸ್ಯಾಸ್ಪದ. ಕನ್ನಡವನ್ನು ಅಭಿವೃದ್ಧಿಪಡಿಸಬೇಕೆಂದು ಮೈಸೂರಿನಲ್ಲಿ ವಿಶ್ವ ಕನ್ನಡ ಮೇಳ ನಡೆದಾಗ ಕನ್ನಡದ ಉತ್ತಮ ಕೃತಿಗಳನ್ನು ಆಯ್ಕೆ ಮಾಡಿ ಸಬ್ಸಿಡಿ ರೇಟಿನಲ್ಲಿ ಪುಸ್ತಕಗಳನ್ನು ಮಾರಾಟ ಮಾಡಿದಿರಿ. ಆಗ ಪುಸ್ತಕಗಳನ್ನು ಪಡೆಯುವುದಕ್ಕೆ ಗುದ್ದಾಟ ನಡೆಯಿತಾ. ಏಕೆಂದರೆ ಪುಸ್ತಕಗಳು ಅಷ್ಟು ಅಗ್ಗವಾಗಿದ್ದುವು. ಅದೇ ರೀತಿ ಈಗಲೂ ಉತ್ತಮ ಪುಸ್ತಕಗಳನ್ನು ಅಚ್ಚು ಹಾಕಿಸಿ ಮಾರಾಟ ಮಾಡಿದಿದ್ದರೆ ಕನ್ನಡ ಸಾಹಿತ್ಯದ ಭಂಡಾರ ಬೆಳೆಯುತ್ತಿರಲಿಲ್ಲವೇ ? ಅದರ ಬದಲು ಕನ್ನಡ ಬಾರದವರನ್ನೆಲ್ಲ ನಿಯೋಗ ಮಾಡಿಕೊಂಡು ಕರೆದುಕೊಂಡು ಹೋಗಿದ್ದು ಕನ್ನಡ ಕಲಿಸುವುದಕ್ಕೋ ಅಥವಾ ಇಂಗ್ಲೀಷ್ ಕಲಿಸುವುದಕ್ಕೋ ?

ಶ್ರೀ ಎಂ. ಪಿ. ಪ್ರಕಾಶ್.— ಸನ್ಮಾನ್ಯ ಉಪಸಭಾಧ್ಯಕ್ಷರೇ, ಮ್ಯಾಂಚೆಸ್ಟರ್‌ನಲ್ಲಿ ಕನ್ನಡ ಸಮ್ಮೇಳನದ ಔಚಿತ್ಯದ ಬಗ್ಗೆ ಯಾವುದೇ ಚರ್ಚೆ ನಡೆಯಲಿ ನಾನು ಉತ್ತರ ಕೊಡಲಿಕ್ಕೆ ಸಿದ್ಧನಿದ್ದೇನೆ. ಆದರೆ ಕನ್ನಡ ಸಮ್ಮೇಳನವೇ ಬೇಡ ಎನ್ನುವುದಾದರೆ ಹಾಗೂ ಇತರ ಸಾಂಸ್ಕೃತಿಕ ಆಯಾಮಗಳ ಬಗ್ಗೆ ನಾವು ಕುರುಡರಾಗಿರಬೇಕು ಎನ್ನುವುದಾದರೆ ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆಯನ್ನೇ ಮುಚ್ಚಬೇಕಾಗುತ್ತದೆ. ಸಮ್ಮೇಳನದ ಸಾಧನೆಯೆಂದರೆ ಅನೇಕ ವಿಚಾರಗಳಲ್ಲಿ ಅನಿವಾಸಿ ಭಾರತೀಯ ಕನ್ನಡಿಗರು ತಮ್ಮ ಸಾಂಸ್ಕೃತಿಕ ಪರಂಪರೆಯಿಂದ ತಬ್ಬಲಿಗಳಾಗದಂತೆ ಮತ್ತು ಅವರು ಅನುಭವಿಸುತ್ತಿರುವ ಮುಖ್ಯ ತೊಂದರೆಗಳ ಬಗ್ಗೆ ಅಲ್ಲೆಲ್ಲ ಚರ್ಚೆಯಾಗಿದೆ. ಅಲ್ಲೂ ಕೂಡ ಅನೇಕ ಪುಸ್ತಕಗಳನ್ನು ಬಿಡುಗಡೆ ಮಾಡಿದ್ದೇವೆ. ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಬಿಡುಗಡೆ ಮಾಡಬೇಕೆನ್ನುವುದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಆದರೆ ಸಮ್ಮೇಳನವನ್ನು ಮ್ಯಾಂಚೆಸ್ಟರಿನಲ್ಲಿ ನಡೆಸಿದ್ದೇ ಹಾಸ್ಯಾಸ್ಪದ ಎನ್ನುವುದು ಲಕ್ಕಪ್ಪನವರಿಗೆ ಹೇಗೆ ಹೊಳೆಯಿತೋ ಗೊತ್ತಿಲ್ಲ. ನನ್ನನ್ನು ಮ್ಯಾಂಚೆಸ್ಟರಿಗೆ ಕರೆದುಕೊಂಡು ಹೋಗಿ ಎಂದು ಅವರು ನನಗೆ ಮನವಿ ಕೊಟ್ಟಾಗ ಇದು ಏಕೆ ಅವರಿಗೆ ಹೊಳೆದಿರಲಿಲ್ಲವೋ ಎಂದು ನಾನು ಅವರನ್ನು ಕೇಳುತ್ತೇನೆ.

ಶ್ರೀ ಆರ್. ವೆಂಕಟರಾವಮಯ್ಯ.— ಇದು ಸರಿಯಲ್ಲ.

ಗದ್ದಲ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇದು ಅತಿಯಾಯಿತು. ಈ ಸದನದಲ್ಲಿ ಶಾಸಕರ ಸಚಿವರ ಪಗಾರ ಭತ್ಯೆಗಳ ಬಗ್ಗೆ ಎಷ್ಟೋ ಸದಸ್ಯರು ವಿರೋಧಿಸಿ ಮಾತನಾಡಿದವರೆಲ್ಲ ಅವನ್ನು ಪಡೆದುಕೊಳ್ಳುವುದನ್ನು ಬಿಟ್ಟುಬಿಟ್ಟಿದ್ದಾರೆಯೇ ? ಇಲ್ಲಿ ಯಾವುದನ್ನು ಹೇಳಬೇಕೋ ಅದನ್ನು ಬಿಟ್ಟು ಅವರು ನನ್ನ ಹೆತ್ತರ ಬಂದಿದ್ದರು ಅಂದರೆ ಹೇಗೆ ?

SRI M. VEERAPPA MOILY.—You must withdraw that.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ಅವರು ಅರ್ಜಿ ಕೊಟ್ಟಿದ್ದನ್ನು ಪ್ರೊಡ್ಯೂಸ್ ಮಾಡಿ.

(ಗೊಂದಲ)

ಶ್ರೀ ವಂಲ್ಲಿಕಾರ್ಜುನ ಎಂ. ಖರ್ಗೆ.—ನೀವು ನೀತಿ ಹೇಳುವುದು ಬೇಡ.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್,— ನಾನು ಉತ್ತರ ಕೊಡುತ್ತೇನೆ

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ದಯಮಾಡಿ ತಾವು ನಾನು ಹೇಳುವುದನ್ನು ಸಾವಧಾನದಿಂದ ಆಲಿಸಬೇಕು,ಇದು ಒಬ್ಬ ಸದಸ್ಯರ ಬಗ್ಗೆ ಸಂಬಂಧಪಟ್ಟಿರತಕ್ಕಂತಹ ವಿಚಾರ.ಪ್ರಶ್ನೆ ಕೇಳಿದಂತಹ ಸದಸ್ಯರ ಮೇಲೆ ರಿಫ್ಲೆಕ್ಟ್ ಮಾಡತಕ್ಕಂಥಾದ್ದು, ಅವರ ನೈತಿಕ ತಳಹದಿಯನ್ನು ಅಲುಗಾಡಿಸತಕ್ಕಂತಹ ಅಧಿಕಾರ ಸಚಿವರಿಗೆ ಇಲ್ಲ. ತಾವು ಹೇಳುತ್ತಿದ್ದೀರಿ ಲಂಡನ್‌ಗೆ ಹೋಗಲಿಕ್ಕೆ ಅವರು ಅರ್ಜಿ ಕೊಟ್ಟಿದ್ದಾರೆಂದು, ಅದನ್ನು ಸಭೆಯ ಮುಂದಿಡಿ. By evening you will have to produce all the documents before the House. Other wise you will have to apologise. Else. we will have to move a privilege Motion against you. Mr. Speaker has to step into it. It is for you to protect the interests of the Members.

(ಗೊಂದಲ)

ಇಲ್ಲದಿದ್ದರೆ ನಾವು ನಿಮ್ಮ ಮೇಲೆ ಪ್ರಿವಿಲೇಜ್ ಮೋಷನ್ ಮೂವ್ ಮಾಡಬೇಕಾಗುತ್ತದೆ. It is for the hon. Speaker to protect the interests of Members. ತಾವು ಒಬ್ಬ ಜವಾಬ್ದಾರಿಯುಳ್ಳ ಮಂತ್ರಿಗಳು ಈ ರೀತಿ ಸದನದಲ್ಲಿ ಹೇಳಿಕೆಯನ್ನು ಕೊಟ್ಟು ಹೋಗುವುದಿಲ್ಲ. ಇಂತಹ ಹೇಳಿಕೆಯನ್ನು ಕೊಟ್ಟು ಅದರಿಂದ ಜಾರಿಕೊಳ್ಳಿತಕ್ಕ ಪ್ರಯತ್ನವನ್ನು ಮಂತ್ರಿಗಳು ಮಾಡಲಿಕ್ಕೆ ತಾವು ಬಿಡಬಾರದು, It cannotbe done. ಅಷ್ಟು ಸಲುಗೆಯಿಂದ ಒಬ್ಬ ಸದಸ್ಯರು, ಬಗ್ಗೆ ನಡೆದುಕೊಳ್ಳಲಿಕ್ಕೆ ಅವರಿಗೆ ಅಧಿಕಾರವಿಲ್ಲ. ಮೊದಲು ತಾವು ನಮ್ಮ ತರಹ ಒಬ್ಬ ಸದಸರು, ನಂತರ ಮಂತ್ರಿಗಳು. ಆದ್ದರಿಂದ ತಾವು ಸಾವಧಾನದಿಂದ ಚಿಂತನೆ ಮಾಡಬೇಕಾಗುತ್ತದೆ. ಮಂತ್ರಿಯಾದ ಕೂಡಲೇ ಎಲ್ಲವನ್ನೂ ಮರೆದುಕೊಂಡು ಹೋಗತಕ್ಕಂತಹ ಕೆಲಸ ಮಾಡಬಾರದು. ತಾವು ಹೇಗೆ ಜನರಿಂದ ಆರಿಸಿ ಇಲ್ಲಿ ಸದಸ್ಯರಾಗಿದ್ದೀರಿ ಹಾಗೆಯೇ ಅವರೂ ಕೂಡ ಒಂದು ಲಕ್ಷ ಜನರಿಂದ ಆರಿಸಲ್ಪಟ್ಟಿದ್ದಾರೆ. ಅವನ್ನು ದಯಮಾಡಿ ತಾವು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮೊಯಿಲಿಯವರಾಗಲೀ, ಮಾನ್ಯ ಖರ್ಗೆಯವರಾಗಲೀ, ಏನು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದಾರೆ ಅದಕ್ಕೆ ಸಂಪೂರ್ಣವಾಗಿರತಕ್ಕಂತಹ ಸಮ್ಮತ ನನ್ನದೂ ಇದೆ. ಶಾಸಕರ ಬಗ್ಗೆ ವಿನಾಕಾರಣವಾಗಿರತಕ್ಕಂತಹ ಆಪಾದನೆ ಮಾಡತಕ್ಕಂಥಾದ್ದು ಯೋಗ್ಯ ಅಲ್ಲ ಮತ್ತು ನೈತಿಕವಾಗಿಯೂ ಸರಿಯಾದಂತಹ ಕ್ರಮ ಅಲ್ಲ. ನಾನು ಮೊದಲು ಒಬ್ಬ ಶಾಸಕನಾಗಿ ನಂತರ ಮಂತ್ರಿಯಾಗಿದ್ದೇನೆ ಎಂಬ ಪ್ರಾಥಮಿಕ ಅರಿವು ನನಗೆ ಇದೆ. ನಾನು ಇಲ್ಲಿ ಆಪಾದನೆಯನ್ನು ಮಾಡತಕ್ಕಂತಹ ಸಂದರ್ಭದಲ್ಲಿ ಸಂಪೂರ್ಣವಾದ ಜವಾಬ್ದಾರಿಯನ್ನು ನನ್ನಲ್ಲಿ ಇಟ್ಟುಕೊಂಡು ಈ ಪ್ರಶ್ನೆಗೆ ನಾನು ಉತ್ತರ ಕೊಟ್ಟಿದ್ದೇನೆ. ಮಾನ್ಯ ಲಕ್ಕಪ್ಪನವರು ಸಮ್ಮೇಳನಕ್ಕೆ ಹೋಗಬೇಕಾಗಿದ್ದರೆ ಆಯ್ಕೆ ಮಾಡಿರತಕ್ಕಂಥ ಬೇರೆಯವರ ಜಾಗದಲ್ಲಿ ನಾವು ಸೇರಿಸಲಿಕ್ಕೆ ಬರುವುದಿಲ್ಲ. ಸ್ಪಾನ್ಸರ್ ಅನ್ನು ಮಾಡಬೇಕಾಗುತ್ತದೆ, ಪ್ರತ್ಯೇಕವಾದ ಸಂಸ್ಥೆಗಳು ಸ್ಪಾನ್ಸರ್ ಮಾಡಬಹುದಾಗಿರುತ್ತದೆ. ಉದಾಹರಣೆಗೆ ಹೇಳುವುದಾದರೆ ಎನ್. ಜಿ. ಇ. ಎಫ್. ಮುಂತಾದ ಕಂಪೆನಿಗಳು ಮಾಡಬಹುದು. ಇದರ ಬಗ್ಗೆ ವಿವರಗಳನ್ನು ಕೊಡಬೇಕೆಂದರೆ ಈ ದಿವಸವೇ ಹುಡುಕಂತ್ತೇನೆ. ಮಾನ್ಯ ಖರ್ಗೆಯವರ ನೇತೃತ್ವದಲ್ಲಿ ಮಾನ್ಯ ಲಕ್ಕಪ್ಪನವರು ತಾವು ಎಲ್ಲ ಬನ್ನಿ, ಇದೇ ದಿವಸವೇ ಮಾನ್ಯ ಉಪಾಧ್ಯಕ್ಷರ ಕೊಠಡಿಯಲ್ಲಿ ಸಭೆ ಕರೆಯಿರಿ, ಸಂಬಂಧಪಟ್ಟ ವಿಚಾರಗಳನ್ನು ತಮ್ಮ ಎದುರಿಗೇ ಪ್ರಸ್ತಾಪ ಮಾಡುತ್ತೇನೆ.

(ಗೊಂದಲ)

ಶ್ರೀ ಆರ್. ವೆಂಕಟರಾವಂಗ್ಳು.—ಮಾನ್ಯ ಉಪಾಧ್ಯಕ್ಷರೇ, ಅದು ಈ ಸದನದ ಗಮನಕ್ಕೂ ಬರಲಿ, ಎಲ್ಲರಿಗೂ ತಿಳಿಯಲಿ.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ತಾವು ಮಾನ್ಯ ಮೊಯಿಲಿಯವರನ್ನು, ಮಾನ್ಯ ಖಿರ್ಗಿಯವರನ್ನು ಮತ್ತು ಮಾನ್ಯ ಲಕ್ಕಪ್ಪನವರನ್ನು ಹಾಗೂ ನನ್ನನ್ನು ಕರೆಸಿ, ಯಾವುದೇ ಕೊಠಡಿಯಲ್ಲಾದರೂ ಇದರ ಬಗ್ಗೆ ಚರ್ಚೆಯಾಗಲಿ. ನಾನು ತಪ್ಪು ಮಾಡಿದ್ದರೆ ತಾವು ಯಾವ ಶಿಕ್ಷೆ ಕೊಡುತ್ತೀರೋ ಅದನ್ನು ಅನುಭವಿಸಲಿಕ್ಕೆ ನಾನು ತಯಾರಾಗಿದ್ದೇನೆ.

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಹೇಳಿದರು. ಏನೆಂದರೆ ತಮ್ಮ. ಕೊಠಡಿಗೆ ಕರೆಸಿ, ಅಲ್ಲಿ ಚರ್ಚೆ ನಡೆಯಲಿ ಎಲ್ಲಾ ದಸ್ತಾವೇಜುಗಳನ್ನು ತೋರಿಸುತ್ತೇನೆ ಅಲ್ಲಿ ತೀರ್ಮಾನ ಮಾಡಿ ನನ್ನದು ತಪ್ಪು ಇದ್ದರೆ ನನಗೆ ಪನಿಷ್‌ಮೆಂಟ್ ಕೊಡಿ ಎಂದು ಹೇಳಿದ್ದಾರೆ. ತಮ್ಮ ಕೊಠಡಿಗೆ ಏಕೆ ಕರೆಸುವುದು, ಎಲ್ಲಾ ವಿಷಯಗಳು ನಿಮ್ಮ ಹತ್ತಿರ ಇದ್ದರೆ ಇವತ್ತು ಸಂಜೆಯೊಳಗೆ ಇಲ್ಲವೇ ನಾಳೆ ಇಲ್ಲಿಯೇ ಅದನ್ನು ಪ್ರೊಡ್ಯೂಸ್ ಮಾಡಲಿ, ಇಷ್ಟನ್ನು ಅವರಿಗೆ ತಾವು ಹೇಳಬೇಕೆಂದು ನಾನು ಇಲ್ಲಿ ನಿಂತಿದ್ದೇನೆ.

ಇದರಲ್ಲಿ ಲಕ್ಕಪ್ಪನವರು ತಪ್ಪು ಮಾಡಿದ್ದರೆ ಅವರು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಬೇರೆಯವರು ತಪ್ಪು ಮಾಡಿದ್ದರೆ ಅವರು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಯಾರೂ ಸಹ ತಪ್ಪು ಮಾಡಿಲ್ಲದಿದ್ದರೆ ಯಾರೂ ಕೂಡಾ ಶಿಕ್ಷೆಯನ್ನು ಅನುಭವಿಸಬೇಕಾಗಿಲ್ಲ. ಆದ್ದರಿಂದ ಆ ಅರ್ಜಿಯನ್ನು ಇಲ್ಲಿಯೇ ಇಡಬೇಕು ಎನ್ನುವುದು ಒಂದು ಎರಡನೆಯದು ಇನ್ನೊಂದು ಮಾತನ್ನು ಹೇಳಿದರಿ, ವಿಶ್ವ ಕನ್ನಡ ಸಮ್ಮೇಳನವನ್ನು ಮ್ಯಾಂಚೆಸ್ಟರ್‌ನಲ್ಲಿ ಮಾಡಿದ ಔಚಿತ್ಯದ ಬಗ್ಗೆ ಮಾತನಾಡುತ್ತಾ ಅದು ಔಚಿತ್ಯವೋ ಅನೌಚಿತ್ಯವೋ ಎನ್ನುವ ಬಗ್ಗೆ ವಿವಾದಾಸ್ಪದವಾಗಿದೆ. ತಮ್ಮ ಅಭಿಪ್ರಾಯವನ್ನು ತಾವು ಇಟ್ಟುಕೊಳ್ಳಬಹುದು ತಾವು ಹೇಳಿ ಮಾತನಾಡಿದಿರಿ. ಅದರ ಅರ್ಥ ಏನಾಗುತ್ತದೆ ಎಂದರೆ ತಮ್ಮ ಅಭಿಪ್ರಾಯದಲ್ಲಿ ಔಚಿತ್ಯ ಎಂದು ಆಗುತ್ತದೆ. ನಮ್ಮ ಅಭಿಪ್ರಾಯದಲ್ಲಿ ಅನೌಚಿತ್ಯ ಎಂದು ಆಗುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ತಾವು ಪಕ್ಷದ ಮಂತ್ರಿಯಲ್ಲ, ಜನತೆಯ ಮಂತ್ರಿ ತಾವು. ಆದ್ದರಿಂದ ಎಲ್ಲಾ ಜನರೂ ಕೂಡಾ ಹೇಳುತ್ತಾರೆ. ಇದು ಏಕೆ, ಇಂಥ ಒಂದು ಪರಿಸ್ಥಿತಿಯಲ್ಲಿ ಕರ್ನಾಟಕ ರಾಜ್ಯದಲ್ಲಿಯೇ ಇದನ್ನು ಮಾಡುವುದಕ್ಕೆ ಆಗುತ್ತಿರಲಿಲ್ಲವೇ ಎಂದು ಕಳೆದ ಸಾರಿ ಮೈಸೂರಿನಲ್ಲಿ ಮಾಡಿದ್ದರು. ಈ ಸಲ ಇನ್ನೊಂದು ಕಡೆಯಲ್ಲಿ ಮಾಡಬೇಕಾಗಿತ್ತು. ವಿಶ್ವಕನ್ನಡ ಸಮ್ಮೇಳನವನ್ನು ಮೈಸೂರಿನಲ್ಲಿ ಮಾಡಿದಾಗ ಎಲ್ಲರೂ ಹೊಗಳಿದರು. ಆದ್ದರಿಂದ ವಿಶ್ವಕನ್ನಡ ಸಮ್ಮೇಳನವನ್ನು ಇಂಗ್ಲೆಂಡಿನಲ್ಲಿ ಏತಕ್ಕೆ ಮಾಡಿದರು ಎಂದು ಎಲ್ಲ ಜನರೂ ಕೂಡಾ ಕೇಳುತ್ತಾರೆ. ನಮ್ಮ ಮಾಜಿ ಮಾನ್ಯ ಮುಖ್ಯ ಮಂತ್ರಿಗಳಾದಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಮತ್ತು ತಾವೆಲ್ಲಾ ಖರ್ಚು ಜಾಸ್ತಿ ಇದೆ, ಆರ್ಥಿಕ ಕುಸಿತ ಇದೆ, ಆರ್ಥಿಕ ಬಿಕ್ಕಟ್ಟು ಇದೆ ಎಂದು ಹೇಳುತ್ತೀರಿ. ಈ ರೀತಿಯಲ್ಲಿ ಹೇಳಿ ಏತಕ್ಕೆ ಅಲ್ಲಿ ಮಾಡಬೇಕಾಗಿತ್ತು ? ಇಲ್ಲಿಯೇ ಮಾಡಬಹುದಾಗಿತ್ತಲ್ಲ ಎಂದು ಜನರು ಕೇಳುತ್ತಾರೆ ? ಈಗಲೂ ಕೂಡಾ ಮುಂದಿನ ಸಾರಿ ಬೇರೆ ಕಡೆ ಮಾಡುವಹಾಗಿದ್ದರೆ ಮತ್ತೊಮ್ಮೆ ಪುನರ್ ವಿಮರ್ಶೆ ಮಾಡಿ, ನಮಗೂ ನಿಮಗೂ ಜಗಳ ಬೇಡ, ಎಲ್ಲರನ್ನು ಕನ್ಸಲ್ಟ್ ಮಾಡಿ ಎಲ್ಲಿ ಮಾಡಬೇಕು ಎಂದು ತಿಳಿದುಕೊಂಡು ಮಾಡಬೇಕು ಎಂದು ತಮ್ಮಲ್ಲಿ ಕೇಳಿ ಕೊಳ್ಳುತ್ತೇನೆ.

ಉಪಾಧ್ಯಕ್ಷರು.—ನಾನು ಲಕ್ಕಪ್ಪನವರನ್ನು ಕರೆದಿದ್ದೇನೆ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೆ.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಏನು ಹೇಳಬೇಕೆಂದಿದ್ದೇನೆಂದರೆ, ಈ ಮ್ಯಾಂಚೆಸ್ಟರ್‌ನಲ್ಲಿ ಈ ಕಾರ್ಯಕ್ರಮ ಆಗಬೇಕೋ ಬೇಡವೊ ಎನ್ನತಕ್ಕಂಥದ್ದರ ಬಗ್ಗೆ ಸರ್ಕಾರದವರು ತೀರ್ಮಾನವನ್ನು ತೆಗೆದುಕೊಂಡರು, ಕಳೆದ ನಾಲ್ಕು ವರ್ಷಗಳಿಂದ ಬೇಕರ ಬರಗಾಲಕ್ಕೆ ಈ ರಾಜ್ಯ ತುತ್ತಾಗಿ ಜನ

ಸಾಯಂತ್ತಿರಬೇಕಾದರೆ ಅವರಿಗೆ ಪರಿಹಾರವನ್ನು ಕೊಡಲಿಕ್ಕೆ ಆಗದೇ ಇರತಕ್ಕಂಥ, ಅವರಿಗೆ ಜೀವನಕ್ಕೆ ಒಂದು ದಾರಿ ಮಾಡಿಕೊಡಲಿಕ್ಕೆ ಆಗದೇ ಇದ್ದಂಥ ಈ ಸರ್ಕಾರ ನಿಮ್ಮ ಖುಷಿ ಬಂದಂಥ ರೀತಿಯಲ್ಲಿ ಮ್ಯಾಂಚೆಸ್ಟರ್‌ನಲ್ಲಿ ಈ ರೀತಿಯ ಕಾರ್ಯಕ್ರಮಗಳನ್ನು ಮಾಡಿದ್ದನ್ನು ಈ ರಾಜ್ಯದ ಜನತೆ ಇದನ್ನು ವಿರೋಧ ಮಾಡಿದ್ದಾರೆ. ಪ್ರತಿನಿಧಿಗಳಾದ ನಾವು ಸಹ ಇದನ್ನು ವಿರೋಧ ಮಾಡುತ್ತೇವೆ. ಎರಡನೆಯದು ಸನ್ಮಾನ್ಯ ಲಕ್ಕಪ್ಪನವರಾಗಲೀ ಮತ್ತೊಬ್ಬರಾಗಲೀ ತಮಗೆ ಅರ್ಜಿಯನ್ನು ಕೊಟ್ಟಿದ್ದರೆ ಆ ತರಹ ಸಂದರ್ಭಗಳು ಬಂದಿದ್ದರೆ ಈ ಸದನದಲ್ಲಿ ಅದನ್ನು ಇಡಬೇಕು. ಈ ವಿಷಯವನ್ನು ನಾಲ್ಕು ಗೋಡೆ ಒಳಗಡೆ ಚರ್ಚೆ ಮಾಡಬೇಕೆಂದು ಹೇಳುವಂಥಾದನ್ನು ಈ ಸದನವು ಒಪ್ಪುವುದಕ್ಕೆ ಸಿದ್ದ ಇಲ್ಲ. ಭಾರತೀಯ ಜನತಾ ಪಾರ್ಟಿ ಸದಸ್ಯನಾದ ನಾನು ಇದನ್ನು ಒಪ್ಪುವುದಕ್ಕೆ ಸಿದ್ದ ಇಲ್ಲ, ಕಮ್ಯುನಿಸ್ಟರೂ ನನ್ನ ಸ್ನೇಹಿತರು, ಕಾಂಗ್ರೆಸ್‌ನವರು ಇದನ್ನು ಒಪ್ಪುವುದಕ್ಕೆ ಸಿದ್ಧ ಇಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ದಯವಾಡಿ ಈ ಸದನದಲ್ಲಿಯೇ ಇಡಬೇಕು ಮತ್ತು ಈ ರಾಜ್ಯದ ಜನತೆಗೆ ದ್ರೋಹ ಮಾಡುವಂಥ ಈ ರಾಜ್ಯದ ಜನ ಸಾಯುತ್ತಿರಬೇಕಾದರೆ ಇಂಥ ಮೋಜಿನ ಕಾರ್ಯಕ್ರಮಕ್ಕೆ ಧಿಕ್ಕಾರ, ಅದಕ್ಕಾಗಿ ಸರ್ಕಾರ ಕ್ಷಮಾಪಣೆಯನ್ನು ಕೇಳಬೇಕು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೇ, ಇದು ಪ್ರಶ್ನೋತ್ತರ ಕಾಲ ; ಆದ್ದರಿಂದ ಇದಕ್ಕೆ ಕಾಲಾವಧಿಯಂಥನ್ನು ತಾವು ನಿಗದಿ ಮಾಡಿದ್ದೀರೋ ಹೇಗೆ ?

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಈಗಲೂ ಕೂಡಾ ಎಂತಹ ಪರಿಸ್ಥಿತಿ ಇದೆ ಎಂದು ಪ್ರಕಾಶ್ ರವರೇ ನೋಡಬಹುದು. ಸಿಸಿ ಐಟಂಗಳನ್ನು ಬಿಟ್ಟು ಉಳಿದ ಯಾವ ಬಿಲ್ ಕೂಡಾ ಪಾಸ್ ಆಗಿಲ್ಲ. ಎರಡು ಸಾವಿರ ರೂಪಾಯಿಗಳ ಬಿಲ್ಲನ್ನು ಕೂಡಾ ಡಿಸ್ಟ್ರಿಕ್ಟ್ ಟ್ರೆಜರಿಗೆ ಕಳುಹಿಸಂತ್ತೇವೆ ಎಂದೂ ಹೇಳುತ್ತಾರೆ. ಇಂಥ ಒಂದು ಪರಿಸ್ಥಿತಿ ಇದೆ. ಈ ರೀತಿ ಇರುವಾಗ ವಿಶ್ವಕನ್ನಡ ಸಮ್ಮೇಳನವನ್ನು ಮ್ಯಾಂಚೆಸ್ಟರ್‌ನಲ್ಲಿ ಮಾಡುವಂಥ ಔಚಿತ್ಯ ಏನಿತ್ತು ? ಎರಡನೆಯದು ಆರ್ಟಿಸ್ಟ್‌ನ್ನು ಸೆಲೆಕ್ಟ್ ಮಾಡಿದ್ದೀರಲ್ಲಾ, ಅದಕ್ಕೆ ಯಾವ ಬೇಸಿಸ್ ? ಇದರ ಬಗ್ಗೆ ನೀವೇನಾದರೂ ಪಬ್ಲಿಕ್ ಆಗಿ ಅನೌನ್ಸ್ ಮಾಡಿದ್ದೀರಾ ? ಇಲ್ಲದಿದ್ದರೆ ಇಂಥಿಂಥ ಆರ್ಟಿಸ್ಟ್‌ಗಳು ಹೋಗುತ್ತಾರೆ ಎಂದಾದರೂ ಹೇಳಿದ್ದೀರಾ ? ಕನ್ನಡ ಸಂಸ್ಕೃತಿಯ ಇತಿಹಾಸವನ್ನೂ ಕೂಡಾ ಒಹಳ ಅವ್ಯವಹಾರಗಳು ಇದೆ ಎಂದು ಕೇಳಿದ್ದೇನೆ. ಆದ್ದರಿಂದ ಇದಕ್ಕೆ ಎಲ್ಲಾ ಸಂಸ್ಥೆಗಳು ಕೂಡಾ ವಿರೋಧ ಮಾಡುತ್ತಿವೆ. ಇನ್ನೂ ಒಳ್ಳೆಯ ಆರ್ಟಿಸ್ಟ್‌ಗಳು ಹೋಗಿಲ್ಲ ಎಂಬ ಒಂದು ಆಪಾದನೆ ಕೂಡಾ ಇದೆ. ಮಾನ್ಯ ಲಕ್ಕಪ್ಪನವರ ಬಗ್ಗೆ ಇಂಥ ನೇರವಾದ ಒಂದು ಆಪಾದನೆಯನ್ನು ತಾವು ಮಾಡಿದ್ದೀರಿ. ನಿಮ್ಮ ಅರ್ಜಿ ಇದೆ ಎಂದೂ ಹೇಳಿದ್ದೀರಿ, ಆ ಅರ್ಜಿ ಇದ್ದರೆ ದಯವಿಟ್ಟು ಆ ಅರ್ಜಿಯನ್ನು ಇಲ್ಲಿ ಬಿಡಿ. ಯಾರ್ಯಾರ ಅರ್ಜಿ ಇದೆ, ಅದೆಲ್ಲಾ ಈಚೆಗೆ ಬರಲಿ. ಯಾವುದೇ ಪಾರ್ಟಿಯಾಗಲೀ ಅವರ ಅರ್ಜಿ ಬರಲಿ. ಅದಕ್ಕೆ ಶಿಕ್ಷೆ ಅನುಭವಿಸಬೇಕಾಗಿದ್ದರೆ ಅಲ್ಲಿಗೆ ಹೋಗಿ ರೂಮಿನಲ್ಲಿ ಅವರ ಹತ್ತಿರ ಶಿಕ್ಷೆಯನ್ನು ತೆಗೆದೂ ಕೊಳ್ಳುವುದು ಬೇಡ. ಅದನ್ನು ಇಲ್ಲಿಯೇ ಇಡಬೇಕು. ಏನು ಶಿಕ್ಷೆ ಆಗಬೇಕೋ ಅದು ಇಲ್ಲಿಯೇ ಆಗಲಿ, ಅದು ಬಹಿರಂಗವಾಗಿ ಆಗಲಿ, ಮತ್ತೆ ಒಲಂಪಿಕ್ ಮತ್ತು ಸಿಯೋಲ್‌ಗೆಂದು ಕೆಲವರನ್ನು ಕಳುಹಿಸಿದ್ದಾರೆ, ಅದಕ್ಕೆ ಯಾವ ಬೇಸಿಸ್ ?

ಉಪಾಧ್ಯಕ್ಷರು.—ಏನು ತಾವು ಭಾಷಣ ಮಾಡುತ್ತಿದ್ದೀರಾ ? ದಯವಿಟ್ಟು ಕೂಡ್ರಿ. Where are you leading to ? This is question hour.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಅವರು ಡೀಬೇಟ್ ಮಾಡುತ್ತಿದ್ದಾರಾ ? ಇದು ಕ್ವಶ್ಚನ್ ಹವರ್. Where are we going ?

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಈಗ ವಿರೋಧ ಪಕ್ಷದವರು ಯಾವುದಾದರೂ ಒಂದು ಇಂಥದ್ದು ಮ್ಯಾಂಚೆಸ್ಟರ್‌ನಲ್ಲಿ ಆಗತಕ್ಕಂಥದ್ದು ಸರಿಯಲ್ಲ ಎಂದು ಹೇಳಿದರೆ ಅವರನ್ನು

ಬಾಯಿ ಮುಚ್ಚಿಸಬೇಕು ಎಂದರೆ ಅರ್ಜಿಇದೆ ನೀವು ಬರಬೇಕು ಎಂದು ಹೇಳತಕ್ಕಂಥ ಒಂದು ದಾಟಿಯಲ್ಲಿ ಅವರು ಹೇಳುತ್ತಿದ್ದಾರೆ. ಇದು ಒಂದೇ ಅಲ್ಲ. ಮಾನ್ಯ ಪ್ರಕಾಶ್ ಅವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ಆದರೆ ಇವರ ವರ್ತನೆ ಹೇಗಿದೆ ಎಂದರೆ ಇವತ್ತು ಬೆಳ್ಳಿಗೆ ರಾಮಪ್ಪನವರ ಬಗ್ಗೆ ಇವರು ವರ್ತಿಸಿದ್ದು ನೋಡಿದರೆ ಗೊತ್ತಾಗುತ್ತದೆ. ಪಾಪ ರಾಮಪ್ಪನವರು ಹೇಗೆ ಮಾತನಾಡುತ್ತಾರೆ ಎನ್ನುವುದು ನಿಮಗೂ ಗೊತ್ತಿದೆ.

೧೨-೫೦ ಪಿ. ಎಂ.

ಅವರು ಯಾವಾಗಲೂ ಸಹಜವಾಗಿ ಮಾತನಾಡುತ್ತಾರೆ. ಆದರೆ ಮಂತ್ರಿಗಳು ಮಾತನಾಡುತ್ತಾ ನೀವು ಒಂದು ಟ್ರಾನ್ಸ್‌ಫರ್ ಕೇಸ್ ಅನ್ನು ತಂದಿದ್ದಿರಿ ನಾನಂ ಅದನ್ನು ಮಾಡುವುದಿಲ್ಲವೆಂದು ಹೇಳಿದರೆ ಈ ರೀತಿಯಾಗಿ ಹೇಳುತ್ತೀರಿ ಎಂದು ಹೇಳಿದರು, ಇದರ ಅರ್ಥ ಏನೆಂದರೆ ಯಾವುದೇ ಪ್ರಶ್ನೆಯನ್ನು ಇಲ್ಲಿ ಎತ್ತಿದರೆ ಸರಕಾರಕ್ಕೆ ವಿರೋಧವಾದಂತಹ...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಲಕ್ಕಪ್ಪನವರ ಪತ್ರ ಇದ್ದರೆ ಅದನ್ನು ತಾವು ಇಲ್ಲಿ ಪ್ರೊಡ್ಯೂಸ್ ಮಾಡಬೇಕು, ಇಲ್ಲದಿದ್ದರೆ ನೀವು ಕ್ಷಮಾಪಣೆಯನ್ನು ಕೇಳಿ.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್.—ಈ ಸದನವನ್ನು ಮಿಸ್‌ಲೀಡ್ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ವೇದಾಂತ ಹೆಮ್ಮಿಗೆ.—ಒಳ್ಳೆಯ ದೃಷ್ಟಿಯಿಂದ ಕೆಲಸ ಮಾಡುವಾಗ ಅವರ ಕಾಲು ಎಳೆಯ ತಕ್ಕಂತಹ ಕೆಲಸ ಮಾಡಬೇಡಿ!

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್.—ಇದು ಪ್ರಶ್ನೋತ್ತರ ಸಮಯ. ಮ್ಯಾಂಚೆಸ್ಟರ್‌ನಲ್ಲಿ ಆದಂತಹ ಕನ್ನಡ ಸಮ್ಮೇಳನದ ಬಗ್ಗೆ ವ್ಯಾಪಕವಾಗಿ ಇಲ್ಲಿ ಚರ್ಚೆಯಾಗಬೇಕೆಂದರೆ ತಾವು ಅದಕ್ಕೆ ಅವಕಾಶ ಕೊಡಿ, ನಾನು ಅದನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ಖರ್ಗೆಯವರು ಹೇಳಿದಂಥಾದ್ದು ಕ್ಕೆ ನಾನು ಉತ್ತರ ಕೊಡಬೇಕಾಗುತ್ತದೆ. ಈ ಪ್ರಶ್ನೆಗೆ ಪೂರಕವಾಗಿ ಅನೇಕ ಪ್ರಶ್ನೆಗಳನ್ನು ಕೇಳಿದರೆ ಉತ್ತರ ಕೊಡುವುದು ಕಷ್ಟವಾಗುತ್ತದೆ ಮತ್ತು ಬೇರೆಯವರ ಸಮಯವನ್ನು ನಾವು ತೆಗೆದುಕೊಳ್ಳುವುದು ಕೂಡ ಸಮಂಜಸವಾಗುವುದಿಲ್ಲ. ನಾನು ಬೆಳಿಗ್ಗೆ ಮಾತನಾಡುವಾಗ ಮಾನ್ಯ ರಾಮಪ್ಪನವರಿಗೂ ಇದೇ ತರಹದ ಅಂದರೆ ಟ್ರಾನ್ಸ್‌ಫರ್ ಮಾಡುವಂತಹ ವಿಷಯದಲ್ಲಿ ಇದೇ ಧಾಟಿಯಲ್ಲಿ ಪ್ರಶ್ನೆ ಮಾಡಿದೆ ಅದನ್ನು ನಾನು ಹೇಳಬೇಕಾದ ಅಗತ್ಯವಿಲ್ಲವೆಂದು ಮಾನ್ಯ ಖರ್ಗೆಯವರು ಹೇಳಿದರು. ಅವರು ಆ ರೀತಿ ಹೇಳತಕ್ಕಂಥಾದ್ದು ಸರಿಯಲ್ಲ ತಪ್ಪಾಗುವಂತಹ ರೀತಿಯಲ್ಲಿ ಈ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಇಲ್ಲಿ ಮೂಲಭೂತವಾಗಿರತಕ್ಕಂತಹ ಪ್ರಶ್ನೆ ಬೇರೆ ವಿಷಯದ್ದು. ಶ್ರೀಮಾನ್ ನಾಯಕ್‌ರವರು ೧೬ ಸಾವಿರ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಸಾಧ್ಯವಿಲ್ಲವೇ ಎನ್ನುವುದರ ಬಗ್ಗೆ ಪ್ರಶ್ನೆ ಕೇಳಿದಾಗ ೨,೧೧೧ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ ಉಳಿದಿರತಕ್ಕಂತಹ ಹಣವನ್ನು ೮ ದಿವಸದ ಒಳಗೆ ಖರ್ಚು ಮಾಡಿ ವರದಿ ಕಳಿಸಬೇಕೆನ್ನತಕ್ಕಂತಹ ಸೂಚನೆಯನ್ನು ಅಧಿಕಾರಿಗಳಿಗೆ ಕಳಿಸುತ್ತೇನೆಂದು ಹೇಳಿದಾಗ ಅಧಿಕಾರಿಗಳು ನಿಮ್ಮ ಮಾತನ್ನು ಕೇಳುವುದಿಲ್ಲ ಇದು ಬೇಜವಾಬ್ದಾರಿ ಸರಕಾರ, ನಿಮ್ಮ ಅಧಿಕಾರಿಗಳ ಮೇಲೆ ನಿಮಗೆ ಹತೋಟಿ ಇಲ್ಲವೆಂದು ಮಾನ್ಯ ನಾಯಕ್‌ರವರೂ ಹೇಳುವಾಗ, ಮಾನ್ಯ ರಾಮಪ್ಪನವರು ಬಳ್ಳಾರಿ ಜಿಲ್ಲೆಯಲ್ಲಿನ ೫ ಜನ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗಳು ಒಂದೇ ಜಾತಿಯವರಾಗಿದ್ದಾರೆ ನೀವು ಒಂದೇ ಜಾತಿಯವರನ್ನು ಅಲ್ಲಿಗೆ ಹಾಕಿಸಿದ್ದೀರಿ ಎಂದು ಆಪಾದನೆ ಮಾಡಿದರು. ಆದರೆ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಅನ್ನು ಹಾಕುವಂತಹ ವಿಚಾರದಲ್ಲಿ ಯಾರ್ಯಾರು ಪತ್ರಗಳನ್ನು ಕೊಟ್ಟಿದ್ದಾರೆ ಅದರಲ್ಲಿ ನನ್ನದು ಯಾವುದೇ ಪ್ರವೇಶವಿಲ್ಲವೆಂದು ಅವರಿಗೂ ಗೊತ್ತಿದೆ. ಹಾಗಿದ್ದಾಗ್ಯೂ ನೇರವಾಗಿ

ಈ ವಿಷಯಗಳನ್ನು ಪ್ರಸ್ತಾಪ ಮಾಡಿ ನೀವು ಈ ದಿವಸ ಅದೇ ಜನಗಳನ್ನು ಕಟ್ಟಿಕೊಂಡು ಕನ್ಸೂಮರ್ ಕೋ ಆಪರೇಟೀವ್ ಸೊಸೈಟಿಯ ಒಬ್ಬಪ್ಪಡ್ ಅಸಿಸ್ಟೆಂಟ್ ಮೇಲೆ ಎನ್‌ಕ್ವೈರಿ ಮಾಡಿದ್ದಾರೆ ಆ ಕಾರ್ಯಕ್ಕಾಗಿ ಅವರ ಮೇಲೆ ಕ್ರಮ ಕೈಗೊಳ್ಳಬೇಕು ಇಲ್ಲದಿದ್ದರೆ ಅವರನ್ನು ವರ್ಗ ಮಾಡಿ ಎಂದು ಹೇಳಿದರಂ. ನೀವು ನನ್ನನ್ನು ಅಂದರೆ ನಾನು ಜಾತಿ ರಾಜಕರಣ ಮಾಡಿದ್ದೀರಿ ಎಂದು ಆಪಾದನೆ ಮಾಡಿದರೆ ನಾನು ಸಹ ಈ ವಿಷಯವನ್ನು ಇಲ್ಲಿ ಹೇಳಲೇಬೇಕಾಗುತ್ತದೆಂದು ಅವರಲ್ಲಿ ಅರಿಕೆ ಮಾಡಿಕೊಂಡನೇ ವಿನಃ ಅವರ ಮೇಲೆ ಗೂಬೆ ಕೂರಿಸಬೇಕೆಂದು ಆಪಾದನೆ ಮಾಡಲಿಲ್ಲ ಅಷರು ನನ್ನ ಬಗ್ಗೆ ಹೇಳಿಕೆಯನ್ನು ಕೊಟ್ಟರೆ ನಾನೂ ಕೂಡ ಅದಕ್ಕೆ ಉತ್ತರಕೊಡಬೇಕಾಗುತ್ತದೆ. ಈ ಸದನದಲ್ಲಿ ಇದನ್ನೆಲ್ಲಾ ಚರ್ಚೆ ಮಾಡಬೇಕಾದಂತಹ ಅಗತ್ಯ ಇಲ್ಲ. ಈಗ ಇಲ್ಲಿ ಬಂದಿರತಕ್ಕಂತಹ ಪ್ರಶ್ನೆ ಏನೆಂದರೆ ಮ್ಯಾಂಚೆಸ್ಟರ್‌ನಲ್ಲಿ ವಿಶ್ವ ಕನ್ನಡ ಸಮ್ಮೇಳನ ಮಾಡಬೇಕಾಗಿರತಕ್ಕಂಥಾದ್ದರ ಔಚಿತ್ಯ ರಹಿತವಾಗಿರತಕ್ಕಂತಹ...

(ಗೊಂದಲ)

ಶ್ರೀ ಎಂ. ರಾಮಪ್ಪ.—ಒಂದನ್ನು ಬಿಟ್ಟಿರಿ, ಅದನೂ ಹೇಳಿದ್ದರೆ ಚೆನ್ನಾಗಿತ್ತು.

ಶ್ರೀ ಎಂ. ಪಿ. ಪ್ರಕಾಶ್.—ಈ ವಿಚಾರದಲ್ಲಿ ಅನೇಕ ಸದಸ್ಯರು ಈ ಸದನದಲ್ಲಿ ಚರ್ಚೆ ಆಗಬೇಕೆಂದು ಹೇಳಿದರು: ಈ ವಿಚಾರಗಳ ಬಗ್ಗೆ ಸ್ಪಷ್ಟೀಕರಣ ಬೇಕು ಎಂದು ಹೇಳುವುದಾದರೆ ಇದರ ಬಗ್ಗೆ ತಮ್ಮ ಕೊಠಡಿಯಲ್ಲಿ ಕೂತು ಮಾತನಾಡೋಣ. ಒಬ್ಬ ಶಾಸಕರ ಹಕ್ಕಿಗೆ ಚ್ಯುತಿ ತರಬಾರದು, ಅವರ ಘನತೆ ಗಂಭೀರವನ್ನು ಕಡಿಮೆ ಮಾಡುವಂತಹ ರೀತಿಯಲ್ಲಿ ಲಘುವಾಗಿ ಉತ್ತರ ಕೊಡಬಾರದೆನ್ನುವ ಕಾಳಜಿಯಿಂದ ಮಾನ್ಯ ಮೊಯಿಲಿಯವರು ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡಿದ್ದಾರೆ. ಒಬ್ಬ ಶಾಸಕರ ಹಕ್ಕನ್ನು ಚ್ಯುತಿಗೊಳಿಸಬೇಕು. ಅಥವಾ ಘನತೆ ಗೌರವವನು ಕಡೆಗಾಣಿಸಿ ಲಘುವಾಗಿ ಉತ್ತರ ಕೊಡುತ್ತಿದ್ದೇನೆಂದು ನಾನಂ ತಿಳಿದುಕೊಂಡಿಲ್ಲ. ಯಾರ ಬಗ್ಗೆಯಾಗಲೀ ನಾನು ಉತ್ತರ ಕೊಡುವಾಗ ಲಘುವಾಗಿ ವರ್ತಿಸುತ್ತಿಲ್ಲ. ಅವರ ಕಾಳಜಿಯನ್ನು ಅರ್ಥ ಮಾಡಿಕೊಂಡು ನಾನಂ ಉತ್ತರ ಕೊಟ್ಟಿದ್ದೇನೆ. ಅವರಿಗೆ ಅವಮಾನವಾದ ರೀತಿಯಲ್ಲಿ ಉತ್ತರ ಕೊಟ್ಟಿಲ್ಲ. ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರ ಶ್ರೀ ವೀರಪ್ಪ ಮೊಯಿಲಿಯವರ ಸಮಾಕ್ಷಮಾದಲ್ಲಿಯೇ ಶ್ರೀಮಾನ್ ಲಕ್ಕಪ್ಪ ನವರನ್ನು ಹಾಗೂ ನನ್ನನ್ನು ತಮ್ಮ ಕೊಠಡಿಗೆ ಕರೆಸಿ ಈ ವಿಚಾರದಲ್ಲಿ ಏನೇನು ಘಟನೆಗಳು ನಡೆದಿವೆ, ಅವುಗಳ ಬಗ್ಗೆ ವಿಚಾರಣೆ ನಡೆಯಲಿ. ಅವರು ದೊಡ್ಡ ಅಪರಾಧ ಮಾಡಿದ್ದಾರೆಂಬ ಪ್ರಶ್ನೆ ಇಲ್ಲ. ನಾನು ಅವರ ಅಭಿಪ್ರಾಯವನ್ನು ತಿಳಿದುಕೊಂಡು ಮಾತನಾಡಿದ್ದೇ ಹೊರತು ಅವರಿಗೆ ಯಾವುದೇ ರೀತಿಯ ಅವಮಾನವನ್ನು ಮಾಡುವುದಕ್ಕಾಗಿ ಆಗಲೀ ಅಥವಾ ಲಘುವಾಗಿ ಮಾತನಾಡುವುದಾಗಲೀ ಅಥವಾ ಹಾಸ್ಯಮಾಡಬೇಕೆಂದು ನಾನು ಈ ವಿಚಾರಗಳನ್ನು ಹೇಳಿಲ್ಲ. ತಾವು ಈ ಬಗ್ಗೆ ಏನು ನಿರ್ಣಯವನ್ನು ತೆಗೆದುಕೊಳ್ಳುತ್ತೀರೋ ಅದಕ್ಕೆ ನಾನು ಬದ್ಧನಾಗಿದ್ದೇನೆ.

ಶ್ರೀ ಬಿ.ಎಸ್. ಯಂಡಿಯೂರಪ್ಪ.— ಇದು ಸದನಕ್ಕೆ ಸಂಬಂಧಪಟ್ಟ ವಿಚಾರ ಜನತೆಗೆ ಗೊತ್ತಾಗಬೇಕ್ ಸದನದ ಎಲ್ಲಾ ಸದಸ್ಯರಿಗೂ ಗೊತ್ತಾಗಬೇಕು.

ಶ್ರೀ ಬಿ. ಶಿವರಾಮ ರೆಡ್ಡಿ.—ಇದು ಪ್ರಶ್ನೋತ್ತರ ವೇಳೆ ; ಡಿಸ್‌ಕಷನ್ ಮಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಕೆ.ಪಂಪಾಪತಿ.—ನಿನ್ನೆ ಕಾರ್ಮಿಕರ ಬಗ್ಗೆ ಹಾಗೂ ರೈತರ ಬಗ್ಗೆ ನಾನು ಮಾತನಾಡಲು ಹೋದಾಗ ಅದು ರೆಕಾರ್ಡಿಗೆ ಹೋಗುವುದಿಲ್ಲವೆಂದು ತಾವು ಹೇಳಿದಿರಿ , ಇವತ್ತು ಹೊಟ್ಟೆತುಂಬಾ ಊಟ ಮಾಡುವವರಬಗ್ಗೆ ಇವರೆಲ್ಲ ಮಾತನಾಡುತ್ತಿದ್ದಾರೆ, ಇದಕ್ಕೆ ಅವಕಾಶ ಕೊಡುತ್ತಿದ್ದೀರಿ ಕಾರ್ಮಿಕರ ಬಗ್ಗೆ ಅಥವಾ ರೈತರ ಬಗ್ಗೆ ಯಾರೂ ಸಹ ಯೋಚನೆ ಮಾಡುವುದಿಲ್ಲ. ಏನು ಚರ್ಚೆ ಇದು ? ರಾಷ್ಟ್ರದ ಜನ ಅದರಲ್ಲೂ ಕಾರ್ಮಿಕರು ಹಾಗೂ ರೈತರು ಯಾವ ರೀತಿ ತೊಂದರೆಯಲ್ಲಿದ್ದಾರೆಂಬುದನ್ನು ಚರ್ಚೆ ಮಾಡೋಣ ಅದಕ್ಕೆ ನೀವು ಅವಕಾಶ ಮಾಡಿಕೊಡಿ. ಈ ವ್ಯಾಂಚೇಸ್ಟರ್ ಸಮ್ಮೇಳನದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೀರಿ' ಆದರೆ ಕಾರ್ಮಿಕರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಡುವುದಿಲ್ಲ. ಬಗರ್ ಹುಕುಂ ಸಾಗುವಳಿ ಮಾಡಿದವರು ಜೈಲಿನಲ್ಲಿದ್ದಾರೆ. ಅವರನ್ನು ಬಿಡುಗಡೆ ಮಾಡುವ ಬಗ್ಗೆ ಚರ್ಚೆ ಮಾಡಲು ಸಮಯ ಇಲ್ಲವೆಂದು ಹೇಳುತ್ತೀರಿ. ಇದು ಸರಿಯಲ್ಲ.

ಶ್ರೀ ಬಿ. ಲಕ್ಕಪ್ಪ.—ಶ್ರೀ ಪ್ರಕಾಶ್ ಅವರು ನನ್ನ ಮೇಲೆ ನೇರವಾದ ಆಪಾದನೆಯನ್ನು ಮಾಡಿದ್ದಾರೆ. ಮ್ಯಾಂಚೇಸ್ಟರ್‌ನಲ್ಲಿ ನಡೆದಂತಹ ಕನ್ನಡ ಸಮ್ಮೇಳನಕ್ಕೆ ಜನರ ಅಭಿಪ್ರಾಯ ಏನು ಇತ್ತು ಎಂಬುದನ್ನು ಈ ಸದನದಲ್ಲಿ ಹೇಳತಕ್ಕ ಅಧಿಕಾರ ನನಗೆ ಇದೆ. ಆದಕ್ಕಾಗಿ ನಾನು ಪ್ರಸ್ತಾಪ ಮಾಡಿದ್ದೇನೆ ವಿನಃ ಮತ್ತೆ ಬೇರೆ ಕಾರಣಕ್ಕಲ್ಲ. ಮ್ಯಾಂಚೇಸ್ಟರ್‌ಗೆ ಹೋಗತಕ್ಕ ನಿಯೋಗದಲ್ಲಿ ಯಾರು ಯಾರು ಇದ್ದಾರೆ ಎಂಬುದು ಪತ್ರಿಕೆಗಳಲ್ಲಿ ಬಹಳ ದಿವಸಗಳಿಂದ ಬರುತ್ತಿತ್ತು. ನನ್ನನ್ನು ಶಾಸಕನಾಗಿ ಆ ನಿಯೋಗದಲ್ಲಿ ಕಳುಹಿಸಿ ಎಂಬ ಉದ್ದೇಶ ನನ್ನದಲ್ಲ. ಆ ಬಗ್ಗೆ ನಾನು ಕೇಳಿಯೂ ಇಲ್ಲ ಸರ್ಕಾರದ ವೆಚ್ಚದಲ್ಲಿ ನೀವು ನನ್ನನ್ನು ಕರೆದುಕೊಂಡು ಹೋಗಿ, ಎಂದು ನಾನಂ ಸನ್ಮಾನ್ಯ ಸಚಿವರಿಗೆ ಯಾವುದೇ ರೀತಿಯ ಕಾಗದ ಕೊಟ್ಟಿಲ್ಲ. ಒಂದು ವೇಳೆ ಕೊಟ್ಟಿದ್ದರೆ ಆ ಪತ್ರವನ್ನು ಇಲ್ಲಿ ಪ್ರೊಡ್ಯೂಸ್ ಮಾಡಿದರೆ ನಾನು ಖಂಡಿತವಾಗಿ ತಾವು ಏನು ಶಿಕ್ಷೆಯನ್ನು ಈ ಸದನದಲ್ಲಿ ಅನುಭವಿಸಬೇಕೆಂದು ಹೇಳಿದರೂ ಆ ರೀತಿಯ ಶಿಕ್ಷೆಯನ್ನು ನಾನು ಅನುಭವಿಸಲು ಸಿದ್ಧನಿದ್ದೇನೆ. ಇಲ್ಲಿ ಈ ಮ್ಯಾಂಚೇಸ್ಟರ್ ಸಮ್ಮೇಳನದ ಬಗ್ಗೆ ಜನತೆಯ ಅಭಿಪ್ರಾಯ ಏನು, ಕಲಾವಿದರುಗಳ ಅಭಿಪ್ರಾಯ ಏನು ಎಂಬುದರ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ ಹೊರತು ಬೇರೆ ಉದ್ದೇಶದಿಂದ ಅಲ್ಲ. ಇದನ್ನು ನಾನಂ ಕೇಳಿರುವುದರಿಂದ ಇದರ ಹಿಂದೆ ಏನೇನು ನಡೆದಿದೆ ಎಂಬುದನ್ನು ಇಲ್ಲಿ ಕೆದಕುತ್ತೇನೆಂಬ ಅನುಮಾನ ಅವರಿಗೆ ಇರುವುದರಿಂದ ಅವರಂ ಈ ರೀತಿ ಉತ್ತರ.....

ಶ್ರೀ ಬಿ. ಜಿ. ಬಸವನ ಗೌಡ.—ಈ ಬಗ್ಗೆ ಪ್ರಸ್ತಾಪ ಮಾಡಿ ಕರ್ನಾಟಕದ ಕೀರ್ತಿಗೆ ಅಪಕೀರ್ತಿನ್ನು ಇವರು ತರುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಅವರು ಬರೆದಂತಹ ಪತ್ರವನ್ನು ಈ ಸಭೆಗೆ ಪ್ರೊಡ್ಯೂಸ್ ಮಾಡಲಿ, ಈ ರೀತಿ ಲಘುವಾಗಿ ಮಾನ್ಯ ಮಂತ್ರಿಗಳು ಮಾತನಾಡುತ್ತಾ ಹೋದರೆ ಬಹಳ ಕಷ್ಟವಾಗುತ್ತದೆ. ಪ್ರತಿಯೊಬ್ಬರೂ ಈ ರೀತಿ ಮಾತನಾಡುವುದು ಆಮೇಲೆ ಬಿಟ್ಟು ಬಿಡುವುದು ಈ ರೀತಿ ಆಗಬಾರದು. ಅವರು ಪತ್ರ ಬರೆದಿದ್ದಾರೆ ಅದನ್ನು ಪ್ರೊಡ್ಯೂಸ್ ಮಾಡಲಿ. ಅವರು ಯಾವ ಶಿಕ್ಷೆಗೆ ಗುರಿಯಾಗಬೇಕೋ ಅದಕ್ಕೆ ಸಿದ್ಧರಿದ್ದಾರೆ ಇದನ್ನೂ ತಮ್ಮ ರೂಂನಲ್ಲಿ ಕೂಲಿತು ತೀರ್ಮಾನ ಮಾಡುವುದಕ್ಕಾಗುವುದಿಲ್ಲ. ವಿರೋಧ ಪಕ್ಷದ ಸದಸ್ಯರು ತಪ್ಪು ಮಾಡಿದ್ದಾರೆಯೇ ಅಥವಾ ಇಲ್ಲವೇ ಎಂಬುದು ಇಡೀ ಸದನಕ್ಕೆ ಗೊತ್ತಾಗಲಿ, ಎಲ್ಲ ಜನರಿಗೂ ಇದರ ಬಗ್ಗೆ ಗೊತ್ತಾಗಲು ಅವರು ಆ ಪತ್ರವನ್ನು ಇಲ್ಲಿ ಪ್ರೊಡ್ಯೂಸ್ ಮಾಡಬೇಕು. ಇದರ ಬಗ್ಗೆ ಇಲ್ಲಿ ಮುಚ್ಚುಮರೆ ಮಾಡಿ ಮಾತನಾಡುವುದು ಬೇಡ. ಮಾನ್ಯ ಲಕ್ಕಪ್ಪನವರು ಏನಾದರು ಪತ್ರ ಬರೆದಿದ್ದರೆ ಅದನ್ನು ಮಾನ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಲಿ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಉಪಾಧ್ಯಕ್ಷರೇ, ತಾವು ಪ್ರಶ್ನೋತ್ತರಗಳು ಮುಗಿದ ಕೂಡಲೇ ನನ್ನನ್ನು, ಮಾನ್ಯ ವೀರಪ್ಪ ಮೊಯ್ಲಿ ಅವರನ್ನು ಹಾಗೂ ಮಾನ್ಯ ಲಕ್ಕಪ್ಪನವರನ್ನು ತಮ್ಮ ಕೊಠಡಿಗೆ ಕರೆಸಿ. ಅಲ್ಲಿ ಮಾತನಾಡೋಣ. ಅಲ್ಲಿಗೆ ಮಾನ್ಯ ಮಲ್ಲಿಕಾರ್ಜುನ ಖರ್ಗೆ ಅವರು ಸಹ ಬರಲಿ. ಈ ಬಗ್ಗೆ ತಾವು ಮತ್ತು ಅವರೆಲ್ಲರೂ ಸೇರಿ ಏನು ನಿರ್ಣಯ ಕೊಡುತ್ತೀರೋ ಅದಕ್ಕೆ ನಾನು ಬದ್ಧನಾಗಿರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸದಸ್ಯರ ಬಾಯಿಯನ್ನು ಮುಚ್ಚಿಸಬೇಕೆಂದು ಈ ರೀತಿ ಮಾಡುವುದು ಸರಿಯಲ್ಲ. ತಾವು ಸಭೆಯನ್ನು ಅರ್ಧ ಗಂಟೆ ಕಾಲ ಮುಂದಕ್ಕೆ ಹಾಕಿ. ತಮ್ಮ ಕೊಠಡಿಯಲ್ಲಿಯೇ ಈ ಬಗ್ಗೆ ಒಂದು ನಿರ್ಣಯಕ್ಕೆ ಬರೋಣ.

ಉಪಾಧ್ಯಕ್ಷರು.—ಇಲ್ಲಿಗೆ ಈ ವಿಷಯವನ್ನು ಮುಕ್ತಾಯ ಮಾಡೋಣ. ಈಗ ಮುಂದಿನ ಪ್ರಶ್ನೆಗೆ ಹೋಗೋಣ.

(ಸಭೆಯಲ್ಲಿ ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ತಮ್ಮ ಕೊಠಡಿಗೆ ಹಿರಿಯ ಸದಸ್ಯರನ್ನೆಲ್ಲಾ ಕರೆಸಿ ಮಾತನಾಡಿ ನಾನು ಸಹ ಬರುತ್ತೇನೆ. ಎಲ್ಲರೂ ಸೇರಿ ಒಂದು ತೀರ್ಮಾನಕ್ಕೆ ಬರೋಣ. ಅವರ ಮೇಲೆ ತಪ್ಪು ಹೊರಿಸಬೇಕೆಂಬುದು ನನ್ನ ಉದ್ದೇಶವಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ವಿಚಾರದಲ್ಲಿ ಯಾರು ತಪ್ಪು ಮಾಡಿದ್ದಾರೆಂಬುದು ಇಡೀ ಸದನಕ್ಕೆ ಗೊತ್ತಾಗಲಿ. ಆದ್ದರಿಂದ ಅವರಿಗೆ ತಾವು ಸೂಕ್ತ ಡೈರಕ್ಷನ್ ಕೊಡಬೇಕು.

ಉಪಾಧ್ಯಕ್ಷರು.—ಅಧ್ಯಕ್ಷರ ಕೊಠಡಿಯಲ್ಲಿ ಎಲ್ಲರೂ ಸೇರಿ ಇದನ್ನು ಪರಿಶೀಲನೆ ಮಾಡೋಣ. ಈ ಬಗ್ಗೆ ಸದಸ್ಯರ ಹಚ್ಚು ಚ್ಯುತಿಯಾಗಿದ್ದರೆ ಸೂಕ್ತ ಕ್ರಮ ಕೈಕೊಳ್ಳೋಣ. ಆದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಈ ವಿಚಾರದಲ್ಲಿ ತಾವು ಏನು ಹೇಳಿದ್ದೀರಿ ಮತ್ತು ಅವರು ಏನೂ ಹೇಳಿದ್ದಾರೆಂಬುದನ್ನೆಲ್ಲಾ ಅಧ್ಯಕ್ಷರ ಕೊಠಡಿಯಲ್ಲಿ ಪರಿಶೀಲನೆ ಮಾಡಿ ಒಂದು ತೀರ್ಮಾನಕ್ಕೆ ಬರೋಣ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಲಕ್ಕಪ್ಪನವರು ಮ್ಯಾಂಚೆಸ್ಟರ್‌ಗೆ ಹೋಗುವ ಬಗ್ಗೆ ಮಾನ್ಯ ಮಂತ್ರಿಗಳಿಗೆ ಕಾಗದ ಕೊಟ್ಟಿಲ್ಲ ಮತ್ತು ಆ ಬಗ್ಗೆ ಅವರನ್ನು ಕೇಳಿದಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಮಾನ್ಯ ಮಂತ್ರಿಗಳು ಇದನ್ನು ಒಪ್ಪುತ್ತಿಲ್ಲ. ಇದರ ಬಗ್ಗೆ ಅಧ್ಯಕ್ಷರ ಕೊಠಡಿಯಲ್ಲಿ ಮಾತುಕತೆ ನಡೆಸೋಣ ಎಂದು ಹೇಳುತ್ತಿದ್ದಾರೆ, ಅವರು ಹೇಳಿದ ಪ್ರಕಾರ ಇಂದು ಸಂಜೆ ಅಧ್ಯಕ್ಷರ ಕೊಠಡಿಯಲ್ಲಿ ನಾವೆಲ್ಲರೂ ಸೇರಿ ವಿಚಾರ ಮಾಡೋಣ We should be fair to both of them ಅವರಲ್ಲಿ ಏನಾದರು ಈ ಬಗ್ಗೆ ದಾಖಲೆ ಇದ್ದರೆ ತೋರಿಸಲಿ. ಅದರ ಮೇಲೆ ನಾವು ಚರ್ಚೆ ಮಾಡೋಣ. Thereafter we have to come back here only.

ಶ್ರೀ ಎಂ.ಪಿ. ಪ್ರಕಾಶ್.—ಆಗಬಹುದು.

ಉಪಾಧ್ಯಕ್ಷರು.—ಈಗ ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ಎ. ಕೃಷ್ಣಪ್ಪ.—ಇದರಲ್ಲಿ ನನ್ನ ಹೆಸರು ಸಹ ಇದೆ. ಆದ್ದರಿಂದ ನಾನೂ ಸಹ ಉಪ ಪ್ರಶ್ನೆ ಕೇಳುತ್ತೇನೆ.

ಉಪಾಧ್ಯಕ್ಷರು.—ಮುಂದಿನ ಪ್ರಶ್ನೆ ಕೇಳಲು ಮಾನ್ಯ ಪಾಟೀಲ್ ಅವರನ್ನು ನಾನು ಕರೆದಿದ್ದೇನೆ; ತಾವು ಕುಳಿತುಕೊಳ್ಳಿ.

ಮ್ಯಾಂಚೆಸ್ಟರ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಬಗ್ಗೆ.

೬೯೯. ಶ್ರೀ ಕೆ. ಹಚ್. ಪಾಟೀಲ್ (ಗದಗ) —ಮಾನ್ಯ ವಾರ್ತಾ, ಪ್ರವಾಸೋದ್ಯಮ ಹಾಗೂ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮ್ಯಾಂಚೆಸ್ಟರ್‌ನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳ ತಂಡಕ್ಕೆ ಖರ್ಚು ಮಾಡಿದ ವೆಚ್ಚವೆಷ್ಟು ?

ಆ) ಸಾಧಿಸಿದ ವಾಸ್ತವಿಕ ಗುರಿ.

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವರು).—

ಅ) ರೂ. ೭,೭೮,೯೩೩ ಮಾನ್ಯ ಮುಖ್ಯ ಮಂತ್ರಿಗಳ ಹಾಗೂ ಸಚಿವರುಗಳ ಪ್ರವಾಸ ವೆಚ್ಚ ಸೇರಿಲ್ಲ.)

ಆ) ವಿಶ್ವ ಕನ್ನಡ ಸಮ್ಮೇಳನದಲ್ಲಿ ಭಾಗವಹಿಸಿ ಈ ಕೆಳಗಿನ ಉದ್ದೇಶಗಳನ್ನು ಸಾಧಿಸಲಾಗಿದೆ.

೧ ಕರ್ನಾಟಕದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಪ್ರಚಾರ.

೨ ಅದಿವಾಸಿ ಭಾರತೀಯರು ಅದರಲ್ಲಿಯೂ ಕನ್ನಡಿಗರು ಕರ್ನಾಟಕ ರಾಜ್ಯದ ಅಭಿವೃದ್ಧಿಯಲ್ಲಿ ವಿವಿಧ ರೀತಿಯಲ್ಲಿ ಪಾಲ್ಗೊಳ್ಳುವುದಕ್ಕೆ ಉತ್ತೇಜನ

೩ ಕರ್ನಾಟಕದ ನಿಸರ್ಗ ಸೌಂದರ್ಯ ಮತ್ತು ಪ್ರೇಕ್ಷಣೀಯ ಬಗ್ಗೆ ಪ್ರಚಾರ.

೪ ಕರ್ನಾಟಕದ ಕಲಾವಿದರಿಗೆ ಉತ್ತೇಜನ ಮತ್ತು ವಿಶೇಷ ಅನುಭವ.

೫ ಹೊರನಾಡ ಕನ್ನಡಿಗರೊಡನೆ ಹೆಚ್ಚಿನ ಬಾಂಧವ್ಯ.

೬ ಕರ್ನಾಟಕದ ರೇಷ್ಮೆ ಕರಕುಶಲ ವಸ್ತುಗಳು ಚರ್ಮದ ಸಿದ್ಧಪಡಿಸಿದ ವಸ್ತುಗಳು ಇವುಗಳ ಮಾರಾಟ.